**<u>ದಿಃ 05-08-2019 ರಂದು ಸಾಕ್ಷಿದಾರರು ಹಾಜರಿದ್ದು, ಪ್ರಮಾಣ ವಚನ ಬೋಧಿಸಲಾಯಿತು</u>**

**<u>ಮುಖ್ಯ ವಿಚಾರಣೆಃ ಶ್ರೀ ಆರ್ ಎಂ ಓ ವಕೀಲರಿಂದಃ</u>**

ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆದಿರುವ ಸಂಗತಿಗಳು ನಾನು ಹೇಳಿದ ಪ್ರಕಾರ ಪ್ರಮಾಣೀಕರಿಸಿ ನಿಜ ಇರುತ್ತದೆ.

ನನ್ನ ತಂದೆಯವರು ನನ್ನ ಹೆಸರಲ್ಲಿ ಬರೆದುಕೊಟ್ಟ ಜಿಪಿಎನ್ನು ಹಾಜರುಪಡಿಸಿದ್ದು ನಿಪಿಃ1, ನಮ್ಮ ಕುಟುಂಬದ ನೊಟರೈಸ್ ಪ್ರಮಾಣಪತ್ರವನ್ನು ಹಾಜರುಪಡಿಸಿದ್ದು ನಿಪಿಃ2, ದಾವಾ ಆಸ್ತಿಗೆ ಸಂಬಂಧಪಟ್ಟ ಒಟ್ಟು 16 ಪಹಣಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿಃ3 ರಿಂದ ನಿಪಿಃ18, ದಿಃ 12-04-1973 ನೇ ಸಾಲಿನ ಪಾಲು ವಿಭಾಗ ಪತ್ರದ ದೃಡೀಕೃತ ನಕಲನ್ನು ಹಾಜರುಪಡಿಸಿದ್ದು ನಿಪಿಃ19, ಎಂ ಆರ್ ನಂ.9/2005-06, ಎಂ ಆರ್ ನಂ.366 ನೇದ್ದರ ದೃಡೀಕೃತ ನಕಲುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿಃ20 ಮತ್ತು ನಿಪಿಃ21, 22 ಕೈಬಹರದ ಪಹಣಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿಃ22 ರಿಂದ ನಿಪಿಃ43 ಅಂತ ಗುರುತಿಸಲಾಯಿತು. ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಕರ್ನಾಟಕ ರಿವಿಜನ್ ಸೆಟ್ಲಮೆಂಟ್ ಆಕಾರ ಉತಾರವನ್ನು ಹಾಜರುಪಡಿಸಿದ್ದು ನಿಪಿಃ44, ದಿಃ19-08-2002 ರ ಕ್ರಯ ಪತ್ರದ ದೃಡೀಕೃತ ನಕಲನ್ನು ಹಾಜರುಪಡಿಸಿದ್ದು ನಿಪಿಃ45, ನನ್ನ ತಾತ ಚಿತ್ತಪ್ಪ, ಜಯಪ್ಪ ನನ್ನ ದೊಡ್ಡಪ್ಪ, ಸಣ್ಣಮ್ಮ ನನ್ನ ಅಜ್ಜಿ, ಅವಳಪ್ಪ ನನ್ನ ಅಜ್ಜ, ಜಯಮ್ಮ ನನ್ನ ದೊಡ್ಡಮ್ಮ ಇವರೆಲ್ಲರೂ ಮೃತ ಪಟ್ಟಿದ್ದು ಮರಣ ಪ್ರಮಾಣಪತ್ರಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿಃ46 ರಿಂದ ನಿಪಿಃ51, 4 ಕೇತುವಾರ ಉತಾರಗಳ ದೃಡೀಕೃತ ನಕಲುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿಃ52 ರಿಂದ ನಿಪಿಃ55 ಅಂತ ಗುರುತಿಸಲಾಯಿತು.

**<u>ಪಾಟೀ ಸವಾಲುಃ</u> ಪ್ರತಿವಾದಿಯರ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ